ಅಧ್ಯಕ್ಷರು : ಬಾವಿಯಲ್ಲಿ ಉಪಸ್ಥಿತರಿರುವ ಮಾನ್ಯ ಸದಸ್ಯರುಗಳವರು ಅವರವರ ಸ್ಥಾನಗಳಿಗೆ ಹಿಂದಿರುಗಬೇಕು. ನಿನ್ನೆಯಿಂದ ಇದುವರೆಗೂ ಅಂದರೆ ಅರ್ಧಗಂಟೆಯ ಮೊದಲಿನ ವರೆಗೂ ಏನು ನಡೆಯಿತು ಎಂಬುದು ತಮಗೆಲ್ಲರಿಗೂ ಗೊತ್ತಿದೆ. ಈಗ ವಿರೋಧಪಕ್ಷದ ಎಲ್ಲಾ ನಾಯಕರುಗಳನ್ನು ಮತ್ತು ಸರಕಾರದ ಪ್ರತಿನಿಧಿಗಳನ್ನು ನನ್ನ ಕಚೇರಿಗೆ ಕರೆಸಿ ಚರ್ಚಿಸಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಅದರ ಪ್ರಕಾರ ಮೊದಲು ಮೋಷನ್ ಮೂವ್ ಮಾಡುತ್ತಾರೆ, ನಂತರ ಪ್ರಶ್ನೋತ್ತರ ನಡೆಯಲಿದೆ. ಇವೊತ್ತು ಆರು ಪ್ರಶ್ನೆಗಳಿಗೆ ಮಾತ್ರ ಉತ್ತರ ಬಂದಿದೆ. ನಂತರ ಮೋಷನ್ ಮೇಲೆ ಚರ್ಚೆ ಪ್ರಾರಂಭ ಮಾಡುವುದು ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ದಯವಿಟ್ಟು ತಾವುಗಳೆಲ್ಲರೂ ತಮ್ಮ ತಮ್ಮ ಜಾಗಗಳಿಗೆ ಹೋಗಬೇಕು. ಈ ವಿಚಾರದಲ್ಲಿ ಯಾರಿಗೂ ಯಾವ ಪ್ರೆಸ್ಟೀಜ್ ಬೇಡ. ಸರಕಾರಕ್ಕೂ ಬೇಡ, ವಿರೋಧಪಕ್ಷಕ್ಕೂ ಬೇಡ, ನನಗೂ ಬೇಡ.

[ಬಾವಿಯಲ್ಲಿ ಧರಣಿಯಲ್ಲಿದ್ದ ಸನ್ಮಾನ್ಯ ಸದಸ್ಯರುಗಳವರು ತಮ್ಮ ಸ್ಥಾನಗಳಿಗೆ ತೆರಳಿದರು]

ನಿನ್ನೆಯ ಪ್ರಶ್ನೆಗಳನ್ನು ಮುಂದೆ ಸಮಯ ಬಂದಾಗ ತೆಗೆದುಕೊಳ್ಳೋಣ. ಇವೊತ್ತಿನ ಪ್ರಶ್ನೆಗಳನ್ನು ಈಗ ತೆಗೆದುಕೊಳ್ಳುತ್ತಾ ಇದ್ದೇವೆ.

2. ನಿಯಮ 159ರ ಮೇರೆಗೆ ಪ್ರಸ್ತಾವನೆ ಮಂಡನೆ

ವಿಷಯ : ರಾಜ್ಯ ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೆ, ಈ ಕೆಳಕಂಡ ಪ್ರಸ್ತಾವವನ್ನು ನಾನು ಮಂಡಿಸ ಬಯಸುತ್ತೇನೆ. "ಕಳೆದ ಮೂರು ವರ್ಷಗಳಿಂದ ರಾಜ್ಯದ ಬಹತೇಕ ತಾಲ್ಲೂಕುಗಳಲ್ಲಿ ಸತತವಾಗಿ ಇರುವ ಬರಗಾಲ ಪರಿಸ್ಥಿತಿಯನ್ನು ಹಾಗೂ ಇದುವರೆಗೂ ಈಗಾಗಲೇ ತೆಗೆದುಕೊಂಡಿರುವ ಪರಿಹಾರ ಕ್ರಮಗಳನ್ನು ಹಾಗೂ ತೆಗೆದುಕೊಳ್ಳಬೇಕಾದ ಪರಿಹಾರ ಕ್ರಮಗಳ ಬಗ್ಗೆ ಚರ್ಚಿಸಲು ಸೂಚಿಸುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು.

3. ಪ್ರಶ್ನೋತ್ತರ ವೇಳೆ

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಬರುವ ಸ್ಟಾರ್ಡ್ ಕ್ವೆಶ್ಚನ್‌ಗಳೇನಿವೆ ಅವುಗಳ ಉತ್ತರವನ್ನು ಎಲ್ಲಾ ಮಾನ್ಯ ಸದಸ್ಯರುಗಳಿಗೆ ಕಳುಹಿಸಬೇಕು. ಅನ್‌ಸ್ಟಾರ್ಡ್ ಕ್ವೆಶ್ಚನ್‌ಗಳಿಗೆ ಬೇಕಾದರೆ ಅವರವರಿಗೆ ಕಳುಹಿಸಬಹುದು. ಚು.ಗು.ಪ್ರಶ್ನೆಗಳ ಕುರಿತು ನಾವುಗಳು ಯಾರಾದರೂ ಉಪ ಪ್ರಶ್ನೆಗಳನ್ನು ಕೇಳಬೇಕಾಗಿ ಬರುತ್ತದೆ. ಆದುದರಿಂದ ಉತ್ತರವು ನಮಗೆ ಬೇಕಾಗುತ್ತದೆ.

ಅಧ್ಯಕ್ಷರು : ದಯವಿಟ್ಟು ಕೇಳಿ, ಕೆಲವು ಪ್ರಶ್ನೆಗಳಿಗೆ ಹೆಚ್ಚು ಪುಟಗಳ ಉತ್ತರವಿರುತ್ತದೆ. ಮೊನ್ನೆ ಒಂದು ಪ್ರಶ್ನೆಗೆ 40 ಪುಟಗಳ ಉತ್ತರವಿತ್ತು.

ಶ್ರೀ ಅರಗ ಜ್ಞಾನೇಂದ್ರ : ತಾವುಗಳು ಚು.ಗು.ಪ್ರಶ್ನೆಗಳಿಗೆ ಸಪ್ಲಿಮೆಂಟರಿ ಕೇಳುವುದನ್ನು ಸಸ್ಪೆಂಡ್ ಮಾಡಿದ್ದೀರಾ?

ಅಧ್ಯಕ್ಷರು : ಇಲ್ಲ, ನಾವು ರಾಜ್ಯ ಸಭೆಯಲ್ಲಿ ಮತ್ತು ಲೋಕಸಭೆಯಲ್ಲಿ ಏನು ಪ್ಯಾಟರ್ನ್‌ನ್ನು ಅನುಸರಿಸುತ್ತಾರೆ ಅದನ್ನು ನಾವು ಫಾಲೋ ಮಾಡುತ್ತಾ ಇದ್ದೇವೆ. ತಾವುಗಳು ರುಜು ಹಾಕುವ

ಸ್ಥಳದಲ್ಲಿ ಹಾಗೂ ನೋಟಿಸ್ ಬ್ರಾಂಚ್‌ನಲ್ಲಿ ಉತ್ತರಗಳನ್ನು ಇಟ್ಟಿರುತ್ತೇವೆ. ಆ ಸೌಲಭ್ಯವನ್ನು ಮಾನ್ಯ ಸದಸ್ಯರುಗಳು ಉಪಯೋಗಿಸಿಕೊಳ್ಳಬಹುದು. ಬೇಕಾದವರು ತೆಗೆದುಕೊಳ್ಳಬಹುದು. ಇಲ್ಲ ಎನ್ನುವ ಪ್ರಶ್ನೆಯೇ ಇಲ್ಲ. ಬೇಕಾದರೆ ಈವಾಗಲೂ ಕೊಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಸದನದಲ್ಲಿ ಹಿಂದೆ ನಡೆದು ಬಂದ ಸಂಪ್ರದಾಯವನ್ನು ಮುಂದುವರಿಸುವುದು ಒಳ್ಳೆಯದು. ಅದನ್ನು ಬಿಟ್ಟು ಈಗ ಕೊಡಿಸುತ್ತೇವೆ ಅಥವಾ ಅಲ್ಲಿ ತೆಗೆದುಕೊಳ್ಳುವ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು : ಲೋಕಸಭೆಯಲ್ಲಿ ಮತ್ತು ರಾಜ್ಯ ಸಭೆಯಲ್ಲಿ ಯಾವರೀತಿಯಲ್ಲಿ ಕಾನೂನು ನಿಯಮಗಳನ್ನು ಫಾಲೋ ಮಾಡುತ್ತಾರೋ ಅದನ್ನು ನಾವು ಇಲ್ಲಿ ಫಾಲೋ ಮಾಡುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಲೋಕಸಭೆ ಮತ್ತು ರಾಜ್ಯಸಭೆಗಳು ನಿನ್ನೆಯಿಂದ ಬಂದಿಲ್ಲ. ಮೊದಲಿನಿಂದಲೂ ಇವೆ. ನಮ್ಮಲ್ಲಿ ಮೊದಲಿನಿಂದ ಇದ್ದ ಪದ್ಧತಿಯು ಇರಲಿ. ಅದನ್ನು ಯಾಕೆ ಬದಲಾವಣೆ ಮಾಡಬೇಕು?

ಅಧ್ಯಕ್ಷರು : ಪ್ರತಿಯೊಂದು ರಾಜ್ಯಗಳಲ್ಲಿಯೂ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಸಂಪ್ರದಾಯಗಳನ್ನು ಅನುಸರಿಸಲಾಗುತ್ತದೆ. ನಾವೂ ಕೂಡ ಅದನ್ನು ಫಾಲೋ ಮಾಡುತ್ತೇವೆ. ಅದರಿಂದ ನಿಮಗೆ ಯಾವ ತೊಂದರೆಯೂ ಆಗುವುದಿಲ್ಲ. ರುಜು ಮಾಡುವ ಸ್ಥಳದಲ್ಲಿ ಇಟ್ಟಿದ್ದೇವೆ. ಅದನ್ನು ಎತ್ತಿಕೊಂಡು ಬನ್ನಿ. ನೋಟೀಸ್ ಆಫೀಸ್‌ನಿಂದಲೂ ಬರುವಾಗ ಎತ್ತಿಕೊಂಡು ಬರಬಹುದಲ್ಲವೇ? ಇಲ್ಲಿ ಉತ್ತರಗಳನ್ನು ನಿಮಗೆ ಕೊಡುವುದಿಲ್ಲವೆಂಬ ಪ್ರಶ್ನೆಯೇ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನಿಮ್ಮ ಇಲಾಖೆಯವರಿಗೆ ಇಲ್ಲಿ ತಂದಿರಿಸಲು ತೊಂದರೆಯಾಗುತ್ತದೆಂದು ಹೀಗೆ ಮಾಡಿದ್ದೀರಾ?

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ರಾಜ್ಯ ಸಭೆಯಲ್ಲಿ ಯಾವುದು ಸ್ಟಾರ್ಡ್ ಪ್ರಶ್ನೆಯಾಗಿರುತ್ತದೆ ಅದು ಮೂರು ದಿವಸಗಳ ಮೊದಲು ಕಂಪಲ್‌ಸರಿಯಾಗಿ ಸ್ಪೀಕರ್‌ಗೆ ಬರಬೇಕೆಂದು ಒಂದು ಮ್ಯಾಂಡೇಟರಿ ಮಾಡಿದ್ದಾರೆ. ಆದರೆ ಇಲ್ಲಿ ಇವೊತ್ತು ಬರೀ ಆರು ಪ್ರಶ್ನೆಗಳು ಮಾತ್ರ ಇವೆ. ಹೀಗೆ 15ರಲ್ಲಿ ಆರು ಪ್ರಶ್ನೆಗಳಿಗೆ ಮಾತ್ರ ಉತ್ತರ ಕೊಟ್ಟು ಉಳಿದ 9 ಪ್ರಶ್ನೆಗಳಿಗೆ ಸರಕಾರದವರು ಉತ್ತರ ಕೊಡುವುದಿಲ್ಲವೆಂದರೆ ಹೇಗೆ? ಇದೇ ರೀತಿಯಲ್ಲಿ ವಿಳಂಬವನ್ನು ಮಾಡುವುದಾದರೆ ಅದನ್ನು ತಾವುಗಳು ನಿಯಂತ್ರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರಗಳ ವಿಚಾರದಲ್ಲಿ ಹತ್ತು ದಿವಸಗಳ ಸಮಯಾವಕಾಶವನ್ನು ಕೊಡಬೇಕಾಗಿತ್ತು. ಸದನವನ್ನು ಸ್ವಲ್ಪ ನಿಧಾನವಾಗಿ ಕರೆದಿದ್ದರಿಂದ ಹತ್ತು ದಿನಗಳ ಸಮಯ ಕೊಡಲು ಆಗಲಿಲ್ಲ. ಅದನ್ನು ಏಳು ದಿವಸಕ್ಕೆ ಮೊಟಕು ಮಾಡಿದ್ದೇವೆ. ಅದರಲ್ಲಿ ನಮ್ಮ ತಪ್ಪೇನಿಲ್ಲ. ಸದನ ಕರೆಯುವುದಕ್ಕೆ ಸ್ವಲ್ಪ ನಿಧಾನವಾಯಿತಲ್ಲಾ, ಅದಕ್ಕೋಸ್ಕರ ಕಳುಹಿಸುತ್ತಾರೆ ಬಿಡಿ.... ಸದನವು ಮುಂದಿನ ತಿಂಗಳ 8ನೇ ತಾರೀಖಿನವರೆಗೂ ಇದೆ. ನಿಮ್ಮ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ತರಿಸಿಕೊಡುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ. ಮಾನ್ಯ ಪಾರ್ಲಿಮೆಂಟರಿ ಸಚಿವರು ಗಮನಿಸಬೇಕು. ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಎಲ್ಲಾ ಪ್ರಶ್ನೆಗಳಿಗೆ ಮೂರು ದಿನಗಳಿಗೆ ಮೊದಲು ಉತ್ತರಗಳನ್ನು ಕಳುಹಿಸುತ್ತಾರೆ, ಆದರೆ ಇಲ್ಲಿ ಅದೇ ದಿನಕ್ಕೂ ಉತ್ತರ ಬರುತ್ತಿಲ್ಲವೆಂದು ಮಾನ್ಯ ಸದಸ್ಯರುಗಳು ಕೇಳುತ್ತಿದ್ದಾರೆ. ಮುಂದಿನ ತಿಂಗಳ 8ನೇ ತಾರೀಖಿನವರೆಗೂ ಸಮಯವಿದೆ. ಅಷ್ಟರೊಳಗೆ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ತಪ್ಪದೆ ಒದಗಿಸಿಕೊಡಲು ಮಾನ್ಯ ಪಾರ್ಲಿಮೆಂಟರಿ ಸಚಿವರು ಸೂಚನೆ ನೀಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ತಾವುಗಳು ಈಗ ಪ್ರಶ್ನೋತ್ತರ ವೇಳೆ ಎಂದು ಹೇಳಿದ್ದೀರಿ. ಆದರೆ ಈಗ ಪ್ರಶ್ನೋತ್ತರ ಆಗುತ್ತಾ ಇದೆಯೇ? ಇಂಥ ಸಮಸ್ಯೆಗಳನ್ನು ಪ್ರಶ್ನೋತ್ತರ ಮುಗಿದ ಮೇಲೆ ತೆಗೆದುಕೊಂಡರೆ ಒಳ್ಳೆಯದಲ್ಲವೇ?

ಅಧ್ಯಕ್ಷರು : ಅವರು ಹೇಳುವುದರಲ್ಲೂ ಸತ್ಯವಿದೆ. ಉತ್ತರಗಳನ್ನು ಬೇಗನೆ ದಯವಿಟ್ಟು ತರಿಸಿ.

ಶ್ರೀ ಅರಗ ಜ್ಞಾನೇಂದ್ರ : ತಾವುಗಳೇ ಮುಂದಿನ ತಿಂಗಳ 8ನೇ ತಾರೀಖಿನೊಳಗೆ ಕಳಹಿಸಿ ಕೊಡಿ ಅಂದರೆ ನಮ್ಮ ಪರಿಸ್ಥಿತಿಯು ಏನಾಗಬೇಕು? ತಾವುಗಳು ಸಂಬಂಧಪಟ್ಟವರು ಕಿವಿಹಿಂಡಬೇಕು.

ಅಧ್ಯಕ್ಷರು : ನಾವು ಯಾವ ಯಾವ ಡೇಟ್‌ನ್ನು ಫಿಕ್ಸ್ ಮಾಡಿರುತ್ತೇವೆ, ಆ ಡೇಟ್‌ಗೆ ಅವರು ಕಳುಹಿಸಿಕೊಡುತ್ತಾರೆ. ಸಂಬಂಧಪಟ್ಟವರಿಗೆ ಕಿವಿ ಹಿಂಡುವ ಅವಕಾಶವು ರೂಲ್ಸ್‌ನಲ್ಲಿ ಇಲ್ಲವಲ್ಲಾ?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅದನ್ನು ಮಾಡೋಣ.

ಶ್ರೀ ಅರಗ ಜ್ಞಾನೇಂದ್ರ : ನಮ್ಮದೇ ಉತ್ತರ ಬಂದಿಲ್ಲ ಸ್ವಾಮಿ.

ಅಧ್ಯಕ್ಷರು : ಬರುತ್ತೆ ಬಿಡಿ. ಎಲ್ಲಿಗೂ ಹೋಗುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗೆ ವಿದ್ಯಾರ್ಹತೆಯುಳ್ಳ ಸಹಾಯಕಿಯರನ್ನು ಆಯ್ಕೆ ಮಾಡದೇ ಇರುವುದು

328(3067) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳಿಗೆ ಅರ್ಹ ವಿದ್ಯಾರ್ಹತೆಯುಳ್ಳ ಸಹಾಯಕಿಯರು ಅರ್ಜಿ ಸಲ್ಲಿಸಿದ್ದಲ್ಲಿ, ಅಂತಹವರಿಗೆ ಮಾನ್ಯತೆಯನ್ನು ನೀಡತಕ್ಕದೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ದಿನಾಂಕ: 18.02.02ರ ಸುತ್ತೋಲೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕುಂದಾಪುರ ತಾಲ್ಲೂಕಿನಲ್ಲಿ 12.06.03 ರಂದು ಅಂಗನವಾಡಿ ಕಾರ್ಯಕರ್ತೆಯರ ಎಷ್ಟು ಕೇಂದ್ರಗಳ ಖಾಲಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ; ಅಂಗನವಾಡಿ ಕೇಂದ್ರದ ವಿವರ ನೀಡುವುದು;

ಇ) ಕಾರ್ಯಕರ್ತೆ ಹುದ್ದೆ ಕೋರಿ ಅರ್ಜಿ ಸಲ್ಲಿಸಿರುವ ಅರ್ಹ ವಿದ್ಯಾರ್ಹತೆಯುಳ್ಳ ಸಹಾಯಕಿಯರ ಸಂಖ್ಯೆ ಎಷ್ಟು;

ಈ) ಎಷ್ಟು ಮಂದಿ ಸಹಾಯಕಿಯರನ್ನು ಕಾರ್ಯಕರ್ತೆಯರ ಹುದ್ದೆಗೆ ಆಯ್ಕೆ ಮಾಡಲಾಗಿದೆ;

ಉ) ಆಯ್ಕೆ ಮಾಡದೇ ಇದ್ದಲ್ಲಿ ಕಾರಣವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಹೌದು

ಆ) ಕೆಳಕಂಡ ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯ ಕರ್ತೆಯರ ಖಾಲಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

1. ಐರಬೈಲು
2. ಮತತ್ತೇರು
3. ಕಾರೇಬೈಲು
4. ಗುಡಿಬೆಟ್ಟು
5. ಹೆಮ್ಮಂಜೆ
6. ಮೆಟ್ಟಿನಹೊಲೆ
7. ಹಕ್ಕಲಾಡಿ ಗುಡ್ಡ